ಓ.ಎಸ್. ನಂ. 304/2021

ಪಿ.ಡಬ್ಲ್ಯು: 01 (ಭದ್ರಪ್ಪ)

ದಿನಾಂಕಃ 20.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ ಎನ್ ಸಿ ಎಲ್ ವಕೀಲರಿಂದ.

ನನ್ನ ತಂದೆ 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆ ಖರೀದಿ ಮಾಡಿರುವ ಕ್ರಯ ಪತ್ರದ ಬಗ್ಗೆ ನನ್ನ ತಂದೆ ಮೃತಪಟ್ಟ ನಂತರ 2003 ರಲ್ಲಿ ತಿಳಿದು ಬಂತು. 1968 ರ ಪೂರ್ವದಲ್ಲಿ 1 ನೇ ಪ್ರತಿವಾದಿಯ ತಂದೆಯ ಕಡೆಯಿಂದ ದಾವಾ ಸ್ವತ್ತನ್ನು ನನ್ನ ತಂದೆ ಲೀಸಿನ ಆಧಾರದ ಮೇರೆಗೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಾತಿನ ಪ್ರಕಾರ ಬಂದ ಫಸಲಿನಲ್ಲಿ ಅವರಿಗೆ ಭಾಗವನ್ನು ಸಹ ನನ್ನ ತಂದೆ ನೀಡುತ್ತಿದ್ದರು ಎಂದರೆ ಸುಳ್ಳು. 2003 ರಲ್ಲಿ ನನಗೆ ಕ್ರಯ ಪತ್ರ ಇದೆ ಎಂದು ತಿಳಿದು ಬಂದಿದ್ದು, ಅದಾದ ನಂತರ ಖಾತಾ ವರ್ಗಾವಣೆಗೆ ಪ್ರಯತ್ನ ಮಾಡಿರುತ್ತೇನೆ. ಆ ರೀತಿ ಯಾವ ದಿನಾಂಕದಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಗೊತ್ತಾಗುವುದಿಲ್ಲ. ನನಗೆ 2003 ರಲ್ಲಿ ಯಾವುದೇ ಕ್ರಯ ಪತ್ರ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. 2003 ರಲ್ಲಿ ನನಗೆ ಕ್ರಯ ಪತ್ರ ಸಿಕ್ಕ ಬಗ್ಗೆ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ನಾವು ಕಾಳು ಗುತ್ತಿಗೆ ಆಧಾರದ ಮೇರೆಗೆ ನನ್ನ ತಂದೆ 1968 ರ ಪೂರ್ವದಲ್ಲಿ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಅವರು 1 ನೇ ಪ್ರತಿವಾದಿಯವರ ತಂದೆಯ ಜಮೀನನ್ನು ಕಾಳು ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುತ್ತಿದ್ದ ಕಾರಣ ನಮ್ಮ ತಂದೆಯ ಮೇಲೆ 1 ನೇ ಪ್ರತಿವಾದಿಯ ತಂದೆಗೆ ವಿಶ್ವಾಸ ಇತ್ತು ಎಂದರೆ ಹೌದು.

1 ನೇ ಪ್ರತಿವಾದಿಯ ತಂದೆ 3 ವರ್ಷಕ್ಕೊಮ್ಮೆ ಬೇರೆಯವರಿಗೆ ದಾವಾ ಸ್ವತ್ತನ್ನು ಗುತ್ತಿಗೆಗೆ ನೀಡುತ್ತಿದ್ದರು ಎಂದರೆ ಅವರು ಆ ರೀತಿ ನೀಡಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆ ಅನಕ್ಷರಸ್ಥರು ಎಂದರೆ ಹೌದು. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 1968 ರಿಂದ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಅಜ್ಜನ ಹೆಸರಿಗೆ ನಡೆದುಕೊಂಡು ಬಂದಿದೆ ಎಂದರೆ ಎಲ್ಲಾ ಸುಳ್ಳು. ಇಂದಿಗೂ ಕಂದಾಯ ದಾಖಲಾತಿಗಳು 1 ನೇ ಪ್ರತಿವಾದಿಯ ಅಜ್ಜನ ಹೆಸರಿನಲ್ಲಿದ್ದು ಅವರ ಮಗನಾದ 1 ನೇ ಪ್ರತಿವಾದಿಯ ತಂದೆಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ಭೀಮಪ್ಪನಿಗೆ ಕಾಡಪ್ಪ ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ. ಕಾಡಪ್ಪ ಯಾವಾಗ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಕಾಡಪ್ಪನಿಗೆ 1 ನೇ ಪ್ರತಿವಾದಿ ಏಕೈಕ ಸಂತಾನ ಎಂದರೆ ನನಗೆ ಗೊತ್ತಿಲ್ಲ. 2013 ನೇ ಸಾಲಿನಲ್ಲಿ ಖಾತಾ ಬದಲಾವಣೆ ಮಾಡಲು ನಾನು ಅರ್ಜಿ ನೀಡಿರುತ್ತೇನೆ. ನಾನು ಹೇಳಿರುವ ಅರ್ಜಿ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಸ್ಪಷ್ಟವಾಗಿ ಬರುತ್ತದೆ ಎಂದರೆ ಸುಮಾರಾಗಿ ಬರುತ್ತದೆ.

ಓ.ಎಸ್. ನಂ. 304/2021

ಪಿ.ಡಬ್ಲ್ಯೂ: 01 (ಭದ್ರಪ್ಪ)

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರು ಹೇಳಿದ ಕಾರಣ ಸಹಿ ಹಾಕಿರುತ್ತೇನೆ ಎಂದರೆ ಹೌದು. ವಾದಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಹೌದು. 1 ನೇ ಪ್ರತಿವಾದಿ ಏನು ವಿದ್ಯಾಭ್ಯಾಸ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಈಗಲೂ ಸಹ ದಾವಾ ಸ್ವತ್ತನ್ನು ಲಾವಣಿಗೆ ನೀಡುತ್ತಾರೆ ಎಂದರೆ ಸುಳ್ಳು. ನಾನು ಹೇಳುತ್ತಿರುವುದು ಎಲ್ಲ ಸುಳ್ಳು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.